



(6ನೇ ಪುಟದಿಂದ)

ಬಿಸಿಲಲ್ಲಿ ಬೆಳೆದಾಗ ಉಜ್ವಲ ಬಣ್ಣಗಳನ್ನು ಎತ್ತಿ ತೋರುವ ಕೋಲಿಯಸ್ ನೆರಳಿನಲ್ಲಿ ಬೇರೆಯೆ ಬಣ್ಣಗಳನ್ನು ಕಾಣಿಸುತ್ತದೆ. ಒಮ್ಮೆ ಇರುವ ಎಲೆಯ ಮೇಲಿನ ವಿನ್ಯಾಸ ಬದಲಾಗಿ ಬೇರೊಂದು ಗಿಡವಾಗಿ ತೋರುತ್ತದೆ. ವಿಭಿನ್ನ ಆಕಾರದ, ಅಸಂಖ್ಯಾತ ವರ್ಣಗಳನ್ನು ಹೊಂದಿದ ಈ ಸಸ್ಯವನ್ನು ಕುಂಡಗಳಲ್ಲಿ ಜೋಡಿಸಿ ಮನೆಯ, ಹೂ ತೋಟದ ಅಂದ ಹೆಚ್ಚಿಸಬಹುದು. ಕಾಲುಹಾದಿಯ ಅಕ್ಕಪಕ್ಕದಲ್ಲಿ ಒಂದಕ್ಕೊಂದು ಹೊಂದುವ ಬಣ್ಣಗಳ ಕೋಲಿಯಸ್‌ಗಳನ್ನು ನೆಟ್ಟು ಶೋಭೆ ತರಬಹುದು. ಬಳ್ಳಿಯಾಗಿ ಬೆಳೆವ ಕೋಲಿಯಸ್‌ಅನ್ನು ಕಿಟಕಿಯ ಮೇಲೆ, ತೂಗು ಕುಂಡಗಳಲ್ಲಿ ನೆಟ್ಟು ಅಲಂಕರಿಸಬಹುದು. ಉದ್ಯಾನದ ಇಳಿಜಾರಿನಲ್ಲಿ, ಚಿಕ್ಕ ಗುಡ್ಡಗಳಂತಹ ರಚನೆಗಳಲ್ಲಿ ಬಳಸಿ ಕೋಲಿಯಸ್‌ನ ಕಾರ್ಪೆಟ್‌ಗಳನ್ನು ನಿರ್ಮಿಸಬಹುದು. ಎಲ್ಲಕ್ಕಿಂತ ಹೆಚ್ಚಾಗಿ ವಿವಿಧ ಆಕೃತಿಯ 'ಟೋಪಿಯರಿ'ಗಳನ್ನು ರಚಿಸಲು ಕೋಲಿಯಸ್ ಸೂಕ್ತವಾದುದು.

ಕೋಲಿಯಸ್ ಸಸ್ಯವು ತುಳಸಿ, ತುಂಬೆ, ದೊಡ್ಡಪತ್ರೆ, ಪೆಪ್ಪರ್‌ಮೆಂಟ್‌ಗಳ ಕುಟುಂಬವಾದ 'ಲ್ಯಾಮಿಯೇಸಿ' ಕುಟುಂಬಕ್ಕೆ ಸೇರಿದೆ. ಅವುಗಳಂತೆಯೆ ಹಿತವಾದ ಪರಿಮಳವನ್ನು ಹೊಂದಿದೆ. ಸುಮಾರು 150 ಜಾತಿಯ ಕೋಲಿಯಸ್‌ಗಳಿದ್ದು ಅವುಗಳಲ್ಲಿ ಪೊದರಾಗಿ ಬೆಳೆವ ಸೊಲೆನೋಸ್ಟೆಮೊನ್ ಸ್ಕುಟೆಲ್ಲರಿಯೊಡಸ್ ಅಥವಾ ಕೊಲಿಯಸ್ ಬ್ಲೂಮಿ, ಬಳ್ಳಿಯಾಗಿ ಬೆಳೆವ ಕೊಲಿಯಸ್ ರೆಹ್ನೆಲ್ಟಿಯಾನಸ್, ಹೈಬ್ರಿಡ್ ಗುಂಪಾದ ಕೊಲಿಯಸ್ ಹೈಬ್ರಿಡಸ್ ಮುಖ್ಯವಾದವು. ಬಲು ಚಿಕ್ಕ ಎಲೆಗಳಿಂದ ಹಿಡಿದು ದೊಡ್ಡ ಗಾತ್ರದ ಎಲೆಗಳಿರುವ ಅನೇಕಾನೇಕ ಬಣ್ಣಗಳ ವೈವಿಧ್ಯಮಯ ಆಕಾರದ ಎಲೆಗಳಿರುವ ಅಸಂಖ್ಯಾತ ಹೈಬ್ರಿಡ್‌ಗಳನ್ನು ಇಂದು ನರ್ಸರಿಗಳಲ್ಲಿ ನೋಡಬಹುದು.

ಕೊಲಿಯಸ್ ಅನ್ನು ಬೆಳೆಸುವುದು ಅತಿ ಸುಲಭ. ಸುಮಾರು 6 ಎಂಚು ಉದ್ದದ ಕಡ್ಡಿಗಳನ್ನು ಮರಳು ಗೊಬ್ಬರ ಮಿಶ್ರಿತ ಮಣ್ಣಿನಲ್ಲಿ ನೆಡಬೇಕು. ಗಿಡಗಳು ಚಿಗುರಿ ಒಂದು ಆಕಾರಕ್ಕೆ ಬರುವಾಗ ಎಲ್ಲ ರೆಂಬೆಗಳನ್ನು ತುಟ್ಟತುದಿಯ ಎರಡು ಚಿಗುರೆಲೆಗಳನ್ನು ಚಿವುಟಿ ತೆಗೆಯುತ್ತಿರಬೇಕು. ಹೀಗೆ ಮಾಡುವುದರಿಂದ ಗಿಡವು ಅ ರೆಂಬೆಗಳನ್ನು ಒಡೆದು ಪೊದರಾಗಿ ಬೆಳೆಯುತ್ತದೆ. ಕೊಲಿಯಸ್‌ನ ಹೂಗಳು ಎಲೆಗಳಿಗೆ ಹೋಲಿಸಿದರೆ ಅಷ್ಟೇನೂ ಆಕರ್ಷಕವಲ್ಲವಾದ್ದರಿಂದ ಈ ವಿಧಾನವನ್ನು ಒಳ್ಳೆಯ ಆಕಾರದ ಗಿಡಗಳನ್ನು ಪಡೆಯಲು ಅನುಸರಿಸುತ್ತಾರೆ. ಗಿಡಹೇನು, ಬೂಷ್ಟು ಮುಂತಾದ ಬಾಧೆಗಳನ್ನು ತಡೆಯಲು ನೆಟ್ಟ ಮಣ್ಣಿನಲ್ಲಿ ನೀರು ನಿಲ್ಲದಂತೆ ನೋಡಿಕೊಳ್ಳಬೇಕು. ಊಹಿಸಲಾಗದಷ್ಟು ವರ್ಣಗಳನ್ನು, ವೈವಿಧ್ಯಮಯ ರಚನೆಗಳನ್ನು ಎಲೆಗಳಲ್ಲಿ ಕಾಣಬೇಕಾದರೆ ಕೋಲಿಯಸ್ ಗಿಡವನ್ನು ನೋಡಿಯೇ ತಿಳಿಯಬೇಕು, ನೆಟ್ಟು ಅಚ್ಚರಿಪಡಬೇಕು!